<u>ದಿನಾಂಕಃ **04-06-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್.ಕೆ.ವಿ. ವಕೀಲರಿಂದಃ</u>

ನಾನು ಈ ಅರ್ಜಿಯಲ್ಲಿ 1 ನೇ ಅರ್ಜಿದಾರಳಾಗಿದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನಾನು ಈ ದಿನ ನನ್ನ ಮದುವೆಯ ಆಮಂತ್ರಣ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನಮ್ಮ ಮದುವೆಯ ನೋಂದಣಿಯ ಪ್ರಮಾಣ ಪತ್ರದ ನೋಟರಿ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು. ಎಂ.ಸಿ ಸಂಖ್ಯೆಃ45/2021 ರ ತೀರ್ಪು ಹಾಗೂ ಡಿಕ್ರಿಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4, ನನ್ನ ಮಗನ ಜನನ ಪ್ರಮಾಣ ಪತ್ರದ ನೋಟರಿ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-5, ನನ್ನ ಆಧಾರ್ ಕಾರ್ಡ್ ನ ನೋಟರಿ ದೃಡೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-6, ನನ್ನ ಗಂಡನ ಆಧಾರ್ ಕಾರ್ಡ್ ನ ನೋಟರಿ ದೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-7, ಪತ್ರಿಕಾ ಪ್ರಕಟಣೆ ಜಾಹಿರಾತು ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರು ಏಕಪಕ್ಷೀಯ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

ಮರುವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ